**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

**ದಿಃ 15/10/2025**

**ಅಸಲು ದಾವೆ. ನಂ..** *1/2016*

ಪಿ.ಡಬ್ಲ್ಯೂ- *1*

(ಪಾಟೀ ಸವಾಲು ಃ ಶ್ರೀ ಎನ್. ಕೆ. ವಕೀಲರಿಂದ ಪ್ರತಿವಾದಿಯ ನಂಃ 1, 2 ಮತ್ತು 4 ರವರ ಪರವಾಗಿ )

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಸ್ವಂತ ಊರು ಪಾಂಡವಪುರದ ಬಳಿ ಈರೇಮಳ್ಳಿ. ಮೇಲುಕೋಟೆ ಹೋಬಳಿ. ನನ್ನ ತಂದೆಯ ಹೆಸರು ಕರೀಗೌಡರು. ನಾನು ಚಿಕ್ಕವಳು ಇರುವಾಗಲೇ ನಮ್ಮ ತಂದೆ ಮರಣ ಹೊಂದಿರುತ್ತಾರೆ. ನನ್ನ ತಾಯಿಯ ಹೆಸರು ಚೆನ್ನಮ್ಮ. ನನ್ನ ತಾಯಿ 18 ವರುಷಗಳ ಹಿಂದೆ ನಮ್ಮ ಸ್ವಂತ ಊರಿನಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆಗೆ ನಾವು 7ಜನ ಮಕ್ಕಳು. ಮೊದಲನೆಯವರು ಸಾವಿತ್ರಮ್ಮ, 2ನೆಯವರು ಶಂಕರೇಗೌಡ (ಮರಣಹೊಂದಿರುತ್ತಾರೆ) , 3ನೆಯವರು ಹೊನ್ನೇಗೌಡರು, 4 ನೆಯವರು ಪ್ರಕಾಶ್ (ಬದುಕಿದ್ದಾರೋ ಇಲ್ಲವೂ ಗೊತ್ತಿಲ್ಲ), 5ನೇ ಯವರು ನಾನು ಸುಶೀಲಮ್ಮ, 6ನೇಯವರು ಭಾಗ್ಯ ನನ್ನ ತಂಗಿ, 7ನೆಯವರು ರತ್ನಮ್ಮ ಮೈಸೂರಿನಲ್ಲಿದ್ದಾರೆ. ನಾನು ನನ್ನ ತಂದೆ ತಾಯಿಯ ಮನೆಯಲ್ಲಿ ವಾಸವಾಗಿದ್ದೆ. ನನಗೆ ಗೊತ್ತಿಲ್ಲದೆ ನನ್ನ ಯಜಮಾನರು ಬೇರೆಯವರನ್ನು ವಿವಾಹ ಮಾಡಿಕೊಂಡಿರುತ್ತಾರೆ ಹಾಗಾಗಿ ನಾನು ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇನೆ. ನನ್ನ ಪತಿಯ ಹೆಸರು ಸೋಮಶೇಖರ. ನಾನು ಶ್ರೀರಂಗಪಟ್ಟಣದ ದೇವಸ್ಥಾನದಲ್ಲಿ ಸೋಮಶೇಖರ್ ರವರೊಂದಿಗೆ ನನ್ನ ವಿವಾಹವನ್ನು ಮಾಡಿದ್ದರು. ನನ್ನ ವಿವಾಹವನ್ನು ಸೋಮಶೇಖರ್ ರವರೊಂದಿಗೆ ಮಾಡುವಂತೆ ಕೇಳಲು ಸೋಮಶೇಖರ್ ರವನ್ನು ಸೇರಿ 3 ಜನ ನಮ್ಮ ಮನಗೆ ಬಂದಿದ್ದರು. ಸದರಿ ಯವರ ಹೆಸರು ನನಗೆ ಹೇಳಲು ಬರುವುದಿಲ್ಲ. ಸದರಿ ದಿನ ನನ್ನ ಅಣ್ಣನ ಮಗ ಈರೇಗೌಡ, ನನ್ನ ದೊಡ್ಡಪ್ಪನ ಮಗ ನಿಂಗೇಗೌಡ ಇದ್ದರು. ನಮ್ಮ ಮನೆಗೆ ಮದುವೆ ಮಾತುಕತೆಗಾಗಿ ಸೋಮ ಶೇಖರ್ ರವರು ಮಂಡ್ಯದ ನನ್ನ ದೊಡ್ಡಮ್ಮನಿಗೆ ಪರಿಚಯ ಇದ್ದ ಎಸ್. ಕೆ. ಜಯರಾಂ ಎನ್ನುವರ ಕಡೆಯಿಂದ ಬಂದಿದ್ದರು. ಸದರಿ ಮದುವೆ ಮಾತುಕತೆಯ ದಿನ ನನ್ನ ದೊಡ್ಡಮ್ಮ ಹಾಗೂ ಎಸ್. ಕೆ . ಜಯರಾಮ್ ರವರು ಸಹ ಬಂದಿದ್ದರು. ಸದರಿ 3 ಜನರ ಹೆಸರು ನನಗೆ ತಿಳಿದಿಲ್ಲ. ಯಾವ ದಿನಾಂಕದಂದು ಮತ್ತು ಯಾವ ವರುಷದಲ್ಲಿ ನಮ್ಮ ಮನೆಗೆ ಬಂದಿದ್ದರು ಎಂಬುದು ನನಗೆ ನೆನಪಿಲ್ಲ. ಆದರೆ ಈಗ ವಿವಾಹವಾಗಿ 28 ವರುಷಗಳಾಗಿದೆ. ನನ್ನ ಮದುವೆ ಆಗಿದೆ ಎಂದು ಹೇಳುತ್ತಿರುವುದಕ್ಕಿಂತ ಮುಂಚೆ ಯಾರು ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನ್ನ ತಂಗಿ ಭಾಗ್ಯರವರು ಮಾಡುತ್ತಿದ್ದರು ಎಂದು ಹೇಳುತ್ತಾರೆ. ಸದರಿ ಮದುವೆ ಮಾತುಕತೆಗೆ ಬಂದಿದ್ದರು ಎನ್ನಲಾದ ಎಸ್ ಕೆ ಜಯರಾಂ ಎಂಬ ವ್ಯಕ್ತಿ ಹಾಗುಾ ನನ್ನ ದೊಡ್ಡಮ್ಮ

ಜೊತೆಗೆ ಸೋಮಶೇಖರ್ ರವರೊಂದಿಗೆ ಬಂದಿದ್ದ 3 ಜನರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ನುಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಸದರಿಯವರು ಬದುಕಿರುವುದಿಲ್ಲ , ಆದರೆ ಈರೆಗೌಡರವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ನುಡಿಸುತ್ತೇನೆ. ಮದುವೆ ಮಾತುಕತೆಗಾಗಿ ಮುಂದುವರಿದು ಮತ್ತೆ ಯಾರಾದರೂ ಬಂದಿದ್ದರೆ ಎಂದರೆ ಸಾಕ್ಷಿಯು ಬಂದಿರುವುದಿಲ್ಲ ಲಗ್ನವನ್ನು ಕಟ್ಟಿಸಿ ನಂತರ ವಿವಾಹ ಮಾಡಿರುತ್ತಾರೆ. 1ನೇ ಪ್ರತಿವಾದಿ ಕುಟುಂಬದವರು ಎಲ್ಲರೂ ಅರಕಲಗೂಡು ತಾಲ್ಲೂಕು ಕೊಣನೂರು ಸಿದ್ದಾಪುರ ಗ್ರಾಮದವರು ಎಂದರೆ ಸರಿ. 1ನೇ ಪ್ರತಿವಾದಿ ಸುಂದ್ರಮ್ಮ ಮತ್ತು ದೊಡ್ಡಸ್ವಾಮಿಗೌಡ ರಿಗೆ ಎಷ್ಟು ಜನ ಮಕ್ಕಳು ಎಂದರೆ 3 ಜನ ಮಕ್ಕಳು. ಅವರಲ್ಲಿ ಮೊದಲನೆಯವರು ಸೋಮಶೇಖರ್, 2ನೆಯವರು ಲತಾ, 3ನೇಯವರು ರಾಧ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ-7 ವಂಶವೃಕ್ಷವನ್ನು ನಾನು ಹಾಜರುಪಡಿಸಿರುವುದಿಲ್ಲ. ಸದರಿ ನಿಪಿ-7ರ ಪ್ರಕಾರ ಮೊದಲನೆಯವರು ಲತಾ, 2ನೇಯವರು ಸೋಮಶೇಖರ್ , 3ನೇಯವರು ರಾಧ ಎಂದರೆ ಸರಿ. ಸದರಿ ನಿಪಿ-7ರ ಮಾಹಿತಿಯನ್ನು ಯಾರು ಕೊಟ್ಟರು ಎಂದರೆ ಸಾಕ್ಷಿಯು ಸದರಿ ನಿಪಿ-7ನ್ನು ಕೊಣನೂರಿನಲ್ಲಿ ಬರೆಸಿಕೊಂಡು ಬರಲಾಗಿದೆ. ಬರೆದವರ ಹೆಸರು ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಲು ಈ ರೀತಿಯಾಗಿ ಬರೆಸಿಕೊಂಡು ಹಾಕಿರುತ್ತೇನೆ ಎಂದರೆ ಸರಿ. ನಮ್ಮ ಮದುವೆಯ ದಿನಾಂಕದಂದು ನಡೆಯಿತು ಎಂದು ನನಗೆ ಗೊತ್ತಿಲ್ಲ. ಲಗ್ನ ಪತ್ರಿಕೆಯಲ್ಲಿ ನಮೂದಿದೆ. ನನ್ನ ಮದುವೆಗೆ ಸುಮಾರು 25 ಜನ ಸೇರಿದ್ದರು. ನನ್ನ ಕುಟುಂಬದಿಂದ ನಿಂಗೇಗೌಡರು, ಹೊನ್ನೇಗೌಡ, ಶಂಕರೇಗೌಡರು, ಹೊನ್ನೇಗೌಡರು, ಈರೇಗೌಡರು, ತಮ್ಮೇಗೌಡರು ಉಳಿದವರು ಅವರ ಸ್ನೇಹಿತರು ಮತ್ತು ಸಂಬಂಧಿಕರು ಸೇರಿದ್ದರು. ಸೋಮಶೇಖರ್ ರವರ ಕಡೆಯಿಂದ ಯಾರು ಬಂದಿದ್ದರು ಎಂದು ಮತ್ತು ಅವರುಗಳ ಹೆಸರು ನನಗೆ ಗೊತ್ತಿಲ್ಲ. ಸೋಮಶೇಖರ್ ರವರೊಂದಿಗೆ ಸುಮಾರು 15 ವರುಷಗಳ ಕಾಲ ನಾನು ಮಂಡ್ಯದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಜೀವನ ಸಾಗಿಸಿರುತ್ತೇನೆ. 15 ವರುಷಗಳ ಕಾಲ ನಾವು ಅನ್ಯೋನ್ಯವಾಗಿದ್ದು, ಯಾವುದೇ ನ್ಯಾಯಾಲಯಕ್ಕೆ ಹೋಗಿರುವುದಿಲ್ಲ. ಸೋಮಶೇಖರ್ ರವರ ತಂದೆಯ ಹೆಸರು ಎಂದರೆ ನಾನು ಕೇಳಲು ಪ್ರಯತ್ನಿಸಿಲ್ಲ. ಸೋಮಶೇಖರ್ ರವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಸೋಮಶೇಖರ್ ರವರು ಬಾಡಿಗೆ ಟೆಂಪೋ ಚಾಲಯಿಸುತ್ತಿದ್ದರು. ಯಾರಿಂದ ವಾಹನವನ್ನು ಬಾಡಿಗೆ ಪಡೆದು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸೋಮಶೇಖರ್ ರವರ ಕಡೆಯಿಂದ ನಮ್ಮ ಮದುವೆಗೆ ಬಂದಿದ್ದವರ ಪೈಕಿ ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ನುಡಿಸಲು ಏನದರೂ ತೊಂದರೆ ಇದೆಯೇ ಸಾಕ್ಷಿಯು ಅವರಲ್ಲಿ ಸುಮಾರು ಜನ ಮರಣ ಹೊಂದಿದ್ದು, ಅವರಲ್ಲಿ ಇಬ್ಬರು ಇದ್ದಾರೆ. ಅವರ ಸ್ನೇಹಿತರು ಎಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿವಾಹ ನಡೆದು 28 ವರುಷಗಳಾಗಿದೆ. ಪ್ರತಿವಾದಿ ಸುಂದ್ರಮ್ಮ ನವರ ಮಗ ಸೋಮಶೇಖರ್ ರವರು ದಿನಾಂಕಃ28.04.2015 ರಂದು ಮರಣಹೊಂದಿದ್ದಾರೆ ಎಂದರೆ ಸರಿ. ಸದರಿ ಮರಣ ಪ್ರಮಾಣ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1ರಲ್ಲಿ ಹೆಂಡತಿಯ ಕಲಂ ನಲ್ಲಿ

ನನ್ನ ಹೆಸರು ನಮೂದು ಆಗಿಲ್ಲ ಎಂದರೆ  ಸಾಕ್ಷಿಯು ಏನಾದರೂ ಬರೆದುಕೊಳ್ಳಬಹುದು ಎಂದು ನುಡಿಯುತ್ತಾರೆ.

(ಮುಂದವರಿದ ಪಾಟೀ ಸವಾಲಿಗೆ ವಕೀಲರು ಕಾಲವಕಾಶವನ್ನು ಕೊರಿದ್ದು, ಕಾಲವಕಾಶವನ್ನು ನೀಡಲಾಯಿತು.)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.